PAPERS LAID ON THE TABLE

MR. SECRETARY.—I beg to lay the copy of the following Bills as passed by the Legislative Council:—

1. The Karnataka Village Panchayats (Postponement of Elections) (Amendment) Bill, 1976.
2. The Karnataka Homoeopathic Practitioners (Amendment) Bill, 1976.
3. The Mythic Society (Dissolution and Management) Bill, 1976.
4. The Karnataka Government Parks (Preservation)Amendment) Bill, 1976.
5. The Karnataka Secondary Education Examination Board (Amendment) Bill, 1976.
6. The Karnataka Urban Water Supply and Drainage Board (Amenment) Bill, 1976.

MADAM SPEAKER.—Papers laid. The Bills one appended or Annexures to this Volume.

ಶ್ರೀ ಟಿ. ಎಂ. ಮಂಜುನಾಥ್.—ನಾನು ಎರಡು ಗಮನಸೆಳೆಯಂವ ಸೂಚನೆಗಳನ್ನು ಕಳುಹಿಸಿದ್ದೆ. ಅದು ಸರ್ಕಾರದ ಗಮನಕ್ಕೆ ಹೋಯಿತೋ ಇಲ್ಲವೋ ಗೊತ್ತಿಲ್ಲ.

ಅಧ್ಯಕ್ಷರು.—ಉತ್ತರ ಬಂದ ಮೇಲೆ ಹಾಕುತ್ತೇವೆ.

Personal Explanation by the Minister for Rural Development and Social Welfare

re :—allegations made against him of Sri B. Puttiswamaiah.

ಶ್ರೀ ಎಸ್. ರಾಚಯ್ಯ.—(ಸಮಾಜ ಕಲ್ಯಾಣ ಶಾಖೆಗಳು ಸಚಿವರು) ಮಾನ್ಯ ಅಧ್ಯಕ್ಷರೇ, ರಾಜ್ಯಪಾಲರ ಭಾಷಣದ ಮೇಲೆ ಚರ್ಚೆಯಾಗುವಾಗ, ಈ ಸದನದ ಮಾನ್ಯ ಸದಸ್ಯರಾದ ಶ್ರೀಮಾನ್ ಪುಟ್ಟಸ್ವಾಮಯ್ಯನವರು ಕೆಲವಾರು ಆಪಾದನೆಗಳನ್ನು ನನ್ನ ಇಲಾಖೆಯ ಆಡಳಿತ ಕ್ರಮದ ವಿಚಾರದಲ್ಲಿ ಹಾಗೂ ನನ್ನ ವೈಯುಕ್ತಿಕವಾಗಿ ಸಂಬಂಧಪಟ್ಟ ವಿಷಯಗಳ ಮೇಲೆ ಪ್ರಸ್ತಾಪ ಮಾಡಿದ್ದಾರೆ. ಆದರೆ ಆಡಳಿತದ ವಿಚಾರದಲ್ಲಿ ಅವರು ಯಾವುದೇ ವಿಷಯದಲ್ಲಿ ಪ್ರಸ್ತಾಪ ಮಾಡಿದ್ದರೂ ಕೂಡ ನಾನು ಅವುಗಳಿಗೆ ಭಾಗಿಯಾಗಿದ್ದೇನೆ, ಆದಕ್ಕೆ ಸೂಕ್ತವಾದಂಥ ಉತ್ತರವನ್ನು ಕೊಡತಕ್ಕಂಥಾದ್ದು ನನ್ನ ಜವಾಬ್ದಾರಿ. ಆದರಂತೆ ಅನೇಕ ಆಪಾದನೆಗಳನ್ನೂ ವಂತು ಇಲ್ಲದಸಲ್ಲದ ಆರೋಪಗಳನ್ನು ಮಾನ್ಯ ಸದಸ್ಯರು ಮಾಡಿದ್ದಾರೆ. ಅವೆಲ್ಲವನ್ನು ಕೂಡ ನಾನು ಒಪ್ಪತಕ್ಕದಲ್ಲ, ಆಧಾರರಹಿತ ಎಂದು ಹೇಳುತ್ತೇನೆ. ಅವರು ಕೆಲವಾರು ವಿಷಯಗಳನ್ನು ಪ್ರಸ್ತಾಪ ಮಾಡಿದ್ದಾರೆ. ಹಿಂದೆ ಸರ್. ಎಂ. ವಿಶ್ವೇಶ್ವರಯ್ಯನವರು, ದೊಡ್ಡ ದೊಡ್ಡ ಆಡಳಿತಗಾರರು, ಶ್ರೀ ಮಾನ್ ಹನುಮಂತಯ್ಯನವರು ಇಂತಹವರೆಲ್ಲ ಮಾಡಿದ್ದಾರೆ ಆಗ ಒಳ್ಳೆಯ ಕೆಲಸಕಾರ್ಯಗಳು ಹರಿಜನರಿಗೆ ಆಗಿತ್ತು, ಗಿರಿಜನರಿಗೆ ಆಗಿತ್ತು.

ಅದರೆ ಅವರು ಇವತ್ತು ಎಲ್ಲಾ ಹರಿಜನ ವಂತ್ರಿಗಳನ್ನು ನೇಮಿಸಿಕೊಂಡು ಬುದಿದ್ದೇವೆ, ಹರಿಜನ ಅಧಿಕಾರಿಗಳನ್ನು ನೇಮಿಸಿಕೊಂಡು ಬಂದಿದ್ದೇವೆ ಎಂದು ಹೇಳಿದರು. ಹರಿಜನರ ಉದ್ಧಾರಕ್ಕಾಗಿ ಕೋಟಿ ಗಟ್ಟಲೇ ಹಣವನ್ನು ರಾಜ್ಯದ ಬೊಕ್ಕಸದಿಂದ ಖರ್ಚು ಮಾಡುತ್ತಿದ್ದೇವೆ, ಈ ಹಣ ಎಲ್ಲ ಹರಿಜನರ ವಂತ್ರಿಗಳು ಮತ್ತು ಹರಿಜನರ ಅಧಿಕಾರಿಗಳು ದುರುಪಯೋಗ ಮಾಡುವುದಕ್ಕೆ ಅವಕಾಶಮಾಡಿಕೊಟ್ಟಿ